> ಧರಿಸುವ ಬಟ್ಟೆಗಳದಾಗಲಿ, ಮನೆಯ ಗೋಡೆಗಳದಿರಲಿ, ಬಣ್ಣಗಳ ಆಯ್ಕೆ ಹಾಗೂ ಇಷ್ಟಾನಿಷ್ಟ ಪೂರ್ತಿ ವೈಯಕ್ತಿಕ ಮತ್ತು ವ್ಯಕ್ತಿತ್ವ ಸಂಬಂಧಿ ಎಂದು ಕೆಲವು ಮನಶ್ಶಾಸ್ತ್ರಜ್ಞರೆನ್ನುತ್ತಾರೆ. ಅವರ ಪ್ರಕಾರ ವ್ಯಕ್ತಿಗಳು ಮೆಚ್ಚುವ ಒಂದೊಂದು ಬಣ್ಣವೂ ಒಂದೊಂದು ಗುಣ ಸ್ವಭಾವದ ಸಂಕೇತ. ಅಂದರದು ಆ ವ್ಯಕ್ತಿತ್ವದ ಒಂದೊಂದು ಗುಣ ವಿಶೇಷವನ್ನು ತಿಳಿಸುತ್ತದೆ.

ಲೆಕ್ಕದಲ್ಲಿ ನೋಡುವ ಕಣ್ಣು–ಮನಸುಗಳಿಗೆ ಹೇಗೆ ಕಂಡೀತೆಂಬುದು ಲೆಕ್ಕಕ್ಕಿಲ್ಲ. ಜ್ಯೋತಿಷ್ಯವೆಂದರೂ ಅದರಲ್ಲಿ ಏಕರೂಪತೆ ಇಲ್ಲ. ಸಂಖ್ಯಾ ಶಾಸ್ತ್ರ, ಝೋಡಿಯಾಕ್ ಸೈನ್ಸ್ – ಅಂದರೆ, ಹನ್ನೆರಡು ರಾಶಿ, ಒಂಬತ್ತು ಗ್ರಹ, ನಾಲ್ಕು ಭೂತಗಳು (ಪಂಚ ಅಲ್ಲ!). ವ್ಯವಸ್ಥೆ ಆಧಾರಿತ ಜ್ಯೋತಿಷ್ಯದಲ್ಲೂ ಸೂಕ್ಷ್ಮ ವ್ಯತ್ಯಾಸವಿದೆ. ಝೋಡಿಯಾಕ್‌ನಲ್ಲಿ ಸೂರ್ಯ ಕ್ರಿಯಾಶಕ್ತಿಯ ಪ್ರತೀಕ. ಹೊಳಪಿನ ಚಿನ್ನದ ಬಣ್ಣ. ಶುಕ್ರನು ಪ್ರೇಮದ ಪ್ರತೀಕ. ಕಾಮನಬಿಲ್ಲಿನಲ್ಲಿ (ಈ ಹೆಸರೇ ಅರ್ಥಪೂರ್ಣ, ಮನ್ಮಥನನ್ನು ನೆನಪಿಸುತ್ತದೆ) ಏಳು ಬಣ್ಣಗಳಿದ್ದರೂ, ವಿಜ್ಞಾನಿ ಐಸಾಕ್ ನ್ಯೂಟನ್ ಪ್ರಕಾರ ಕೆಂಪು, ಹಸಿರು, ನೀಲಿ ನೇರಳೆಗಳದೇ ಪ್ರಮುಖ ಆಟ. ಬಿಳಿ ಪರದೆಯಮೇಲೆ ಈ ಬಣ್ಣಗಳ ಸ್ಪಾಟ್ಲೈಟ್ ಬಿಟ್ಟರೆ, ಪರದೆಯಮೇಲೆ ಕಾಣುವುದು ಬಿಳಿಯೇ. ಹಾಗೆಯೇ ಕೆಂಪು–ಹಸಿರು ಬಿಟ್ಟರೆ ಹಳದಿ! ಈ ವಿವರಣೆ ಇನ್ನೂ ಮಜವಾಗಿದೆ. ಕೆಲವು ವಿಜ್ಞಾನಿಗಳು ಹೇಳುವಂತೆ ಕೆಂಪು ಬಣ್ಣದ ಹೂವಿನದು ನಿಜವಾದ ಕೆಂಪಲ್ಲ, ಅದರ ಗಿಡದ ಬಣ್ಣವೂ ಹಸಿರಲ್ಲ, ನಾವು ಸುತ್ತ ಮುತ್ತ ಕಾಣುವ ಯಾವ ಬಣ್ಣವೂ ನಿಜ ಅಲ್ಲ. ಎಲ್ಲ ಮಾಯೆ. ಸೂರ್ಯನ ಬೆಳಕಿನಲ್ಲಿ ಪ್ರತ್ಯೇಕ ಕಿರಣಗಳನ್ನು ಪ್ರತಿಫಲಿಸುವ ಗುಣದಿಂದಾಗಿ ನಾವು ವಸ್ತುಗಳನ್ನು ಬೇರೆಬೇರೆ ಬಣ್ಣಗಳಲ್ಲಿ ನೋಡುತ್ತಿದ್ದೇವೆ ಅಷ್ಟೆ. ಬೆಳಕೂ ಬಣ್ಣರಹಿತವೆ, ಬೆಳಕು ಯಾವುದಾದರೊಂದು ವಸ್ತುವಿನ ಮೇಲೆ ಬಿದ್ದಾಗ ಆ ವಸ್ತು ಬೆಳಕಿನ ಕೆಲವು ತರಂಗಾಂತರ ಕಿರಣಗಳನ್ನು ಹೀರಿಕೊಂಡು ಪರಿಪೂರ್ಣವಲ್ಲದ ಬೆಳಕಿನ ಮಾದರಿಯನ್ನು ಪ್ರತಿಫಲಿಸುತ್ತದೆ. ವಸ್ತುವಿನಿಂದ ವಸ್ತುವಿಗೆ ಬೆಳಕಿನ ಕಿರಣಗಳನ್ನು ಹೀರಿಕೊಳ್ಳುವ ಗುಣ ಭಿನ್ನವಾಗಿದ್ದರಿಂದಲೇ ವಿಶ್ವ ವರ್ಣರಂಜಿತವಾಗಿದೆ. ಒಂದು ವಸ್ತು ಪೂರ್ತಿಯಾಗಿ ಬೆಳಕಿನ ಕಿರಣ ಹೀರಿಕೊಂಡರೆ ಅದು ಕಪ್ಪು. ಬೆಳಕಿನ ಪ್ರತಿಫಲನ ಇಲ್ಲದಿದ್ದಾಗಲೂ ಅದು ಕಪ್ಪೇ. ಇದೊಂದು ರೀತಿಯ ವಿಜ್ಞಾನ ವೇದಾಂತ! ಏಕೆಂದರೆ ಇಲ್ಲೂ ಮಾಯೆಯ ಚಿಂತನೆ ಇದೆಯಲ್ಲವೇ? ಈಲೆಕ್ಕದಲ್ಲೇ ಬಣ್ಣಗುರುಡು ಕೂಡ.

ಇಂಥ ಮಾಯಾ ಬಣ್ಣಗಳನ್ನು ಬೇರೆ ಬೇರೆ ಪರಿಸರಗಳಲ್ಲಿ ನಿರ್ದಿಷ್ಟ ರೀತಿಯಲ್ಲಿ ಪ್ರಭಾವ ಬೀರುವ ಉದ್ದೇಶದಿಂದಲೂ ಬಳಸಲಾಗುವುದು. ಪರಿಸರವನ್ನು ಹಿತವಾಗಿಸುವಲ್ಲಿ ಬಣ್ಣದ ಪಾತ್ರ ಹಿರಿದು. ಬಣ್ಣದ ಬಳಕೆ ವೈಯಕ್ತಿಕ. ನಾವು ಧರಿಸುವ ಬಟ್ಟೆಗಳು, ನಮ್ಮ ಮನೆಯ ವರ್ಣ ಯೋಜನೆಗಳು, ನಮ್ಮ ಪರಿಸರ ಹಿತ್ತಲುಗಳು ಇವೆಲ್ಲ, ನಮ್ಮ ಮನಸ್ಥಿತಿ ಆರೋಗ್ಯ ಸ್ಥಿತಿಗಳನ್ನು ಸೂಚಿಸುತ್ತವೆ. ನಮ್ಮ ವ್ಯಕ್ತಿತ್ವವನ್ನು ವಿವರಿಸುತ್ತವೆ. ನಮ್ಮಲ್ಲಿ ಆಗುವ ಬದಲಾವಣೆಗೆ ತಕ್ಕಂತೆ ನಮ್ಮ ಇಷ್ಟದ ಬಣ್ಣದ ಬದಲಾವಣೆಯೂ ಆಗಬಹುದು. ಇಷ್ಟೆಲ್ಲಾ ವೈಯಕ್ತಿಕವಾದರೆ ಕೆಲವು ಸಾರ್ವಜನಿಕ ಕ್ಷೇತ್ರಗಳಲ್ಲೂ ಇಂಥ ಬಣ್ಣದ ವ್ಯವಸ್ಥೆಗೆ ವಿಶೇಷವಾಗಿ ಮಣೆ ಹಾಕಲಾಗಿದೆ. ಉದಾ: ಶಾಲೆಗಳು, ಆಸ್ಪತ್ರೆ, ನರ್ಸಿಂಗ್ ಹೋಂಗಳು, ಕ್ರೀಡಾಕೇಂದ್ರಗಳು, ವಾಣಿಜ್ಯಕೇಂದ್ರಗಳು, ಬಂದೀಖಾನೆಗಳು, ವಿವಿಧ ಸೇನಾಪಡೆಗಳು ಅಥವಾ ಇಂಥದ್ದೇ ಹತ್ತು ಹಲವಾರು ಸೇವಾಕ್ಷೇತ್ರಗಳಲ್ಲಿ ಆಯಾ ವೃತ್ತಿಧರ್ಮಕ್ಕೆ ಸಂಬಂಧಿಸಿದಂತೆ ಬಣ್ಣದ ವಸ್ತ್ರಸಂಹಿತೆ ಇರುವುದನ್ನು ಕಾಣಬಹುದು. ಸಮಾಜದಲ್ಲಿ ಅವರ ಪಾರಂಪರಿಕ ಪಾತ್ರ. ಘನತೆ, ಗಾಂಭೀರ್ಯ, ಸ್ಥಾನ–ಮಾನಗಳನ್ನು ಪ್ರಚುರಪಡಿಸುವ ದೃಷ್ಟಿಯಿಂದ ಇಲ್ಲಿ ಬಣ್ಣ ಬಳಸಲಾಗುತ್ತದೆ. ಎಲ್ಲ ಬಗೆಯ ಸಮವಸ್ತ್ರವೂ ಆಯಾಯ ವೃತ್ತಿಯ–ಸ್ಥಿತಿಗತಿಯ ಗುಣವಿಶೇಷಗಳನ್ನು ಸೂಚಿಸುತ್ತವೆ. ಶಾಲಾ ಕಾಲೇಜು ವಿದ್ಯಾರ್ಥಿಗಳು, ನರ್ಸ್, ವೈದ್ಯರು, ವಕೀಲರು, ನ್ಯಾಯಾಧೀಶರು, ಸೈನಿಕರು, ವಾಚ್‌ಮ್ಯಾನ್‌ಗಳು, ಪೈಲೆಟ್‌ಗಳು, ಕಂಡಕ್ಟರ್, ಡ್ರೈವರ್, ನಾವಿಕರು, ಕೈದಿಗಳು, ಬೇರೆ ಬೇರೆ ವ್ಯವಹಾರಗಳ ಉದ್ಯೋಗಿಗಳು ಧರಿಸುವ ಸಮವಸ್ತ್ರದ ಹಿಂದೆ ಬಣ್ಣದ ಪಾತ್ರವಿದೆ. ಒಂದೊಂದು ಬಣ್ಣಕ್ಕೂ ಒಂದೊಂದು ಅರ್ಥವಿದೆ, ದನಿಯಿದೆ, ಘನತೆ ಗಾಂಭೀರ್ಯವಿದೆ. 'ನೂರು ಮರ ನೂರು ಸ್ವರ, ಒಂದೊಂದೂ ಅತಿ ಮಧುರ' ಎಂಬಂತೆ ಬಣ್ಣಗಳೂ ಸಹ. ನಮ್ಮ ನಿಸರ್ಗವೂ ಬಣ್ಣಕ್ಕೆ ಸ್ಪಂದಿಸುವುದು ಹೀಗೆಯೇ ಎಂದು ಕಾಣುತ್ತದೆ. ಒಂದೊಂದು ಋತುವಿಗೆ ಒಂದೊಂದು ಬಗೆಯ ಹೂ–ಕಾಯಿ, ಹಣ್ಣು ಚಿಗುರುಗಳು, ದೃಗ್ಗೋಚರ, ಐಂದ್ರಿಕಾನುಭವದ ಬಣ್ಣದ ಲೋಕ!

ಬಣ್ಣ ಕೇವಲ ಕಣ್ಣಿಗೂ ಮನಕ್ಕೂ ಮುದನೀಡುವುದಷ್ಟೇ ಅಲ್ಲ. ಆರೋಗ್ಯದ ವಿಷಯಕ್ಕೂ ಇದು ಬಳಸಲಾಗುತ್ತದೆ. ಕಲರ್ ಹೀಲಿಂಗ್, ಅಂದರೆ 'ಬಣ್ಣದ ಉಪಶಮನ' ಎಂಬ ವಿದ್ಯೆ ಪುರಾತನ ಕಾಲದ್ದು. ಪ್ರಾಚೀನ ಈಜಿಪ್ಟ್, ಚೀನಾ, ಮತ್ತು ಭಾರತದ ನಾಗರೀಕತೆಗಳಲ್ಲಿ, ಇದು ಅಸ್ತಿತ್ವದಲ್ಲಿದ್ದುದು ದಾಖಲೆಯಲ್ಲಿ ಸಿಗುತ್ತದೆ. ಮನುಷ್ಯ ದೇಹದ ಮೇಲೆ ವಿವಿಧ ಬಣ್ಣಗಳು ಬೀರುವ ಪರಿಣಾಮವನ್ನು ಆಧರಿಸಿ ಈ ವಿದ್ಯೆಯ ಪ್ರಯೋಗ ನಡೆಯುತ್ತಿತ್ತು. ಅನೇಕ ಆಧುನಿಕ ಸಂಶೋಧಕರು ಈ ನಿಟ್ಟಿನಲ್ಲಿ ಹಲವಾರು ವಿಚಾರಗಳನ್ನು ಮಂಡಿಸಿದ್ದಾರೆ. ದೈಹಿಕ ಮತ್ತು ಮಾನಸಿಕ ಪರಿಣಾಮಗಳ ದೃಷ್ಟಿಯಿಂದ ಇದರ ಫಲಿತಗಳು ಮಹತ್ವದ್ದಾಗಿವೆ. ಸಂಕ್ಷಿಪ್ತವಾಗಿ ಹೇಳುವುದಾದರೆ ಬಣ್ಣಗಳು ನಮ್ಮ ದೇಹದಲ್ಲಿ ಜೀವರಾಸಾಯನಿಕ ಪ್ರತಿಕ್ರಿಯೆಯನ್ನು ಉತ್ಪಾದಿಸುತ್ತವೆ. ನಮ್ಮ ಮನೋಲಹರಿ, ಭಾವನೆಗಳು ಮತ್ತು ವರ್ತನೆಗಳ ಮೇಲೆ ಇವುಗಳ ಪ್ರಭಾವ ಕೆಲಸ ಮಾಡುತ್ತದೆ. ಚರ್ಚೆಗೆ, ವಿಚಾರಮಂಡನೆಗೆ ಇದೇ ಒಂದು ಪ್ರತ್ಯೇಕ ವಿಷಯವಾದೀತು. ಮಧ್ಯಯುಗದಲ್ಲಂತೂ ದೇವಾಲಯ, ಚರ್ಚ್ ಮುಂತಾದವುಗಳ ನಿರ್ಮಾಣದಲ್ಲಿ ಸಹಜ ಬೆಳಕು ಮತ್ತು ಹರಳುಗಳ ಬಳಕೆಗಳು ಈ ದೃಷ್ಟಿಯಿಂದ ಮಹತ್ವದ ಪಾತ್ರ ವಹಿಸುತ್ತಿದ್ದವು. ಅನೇಕ ರೋಗಗಳ ಉಪಶಮನಕ್ಕೆ ಇಲ್ಲಿ ಇಂತಹ ಬೆಳಕಿನ ಬಳಕೆ ಆಗುತ್ತಿದ್ದ ಉದಾಹರಣೆಗಳಿವೆ. ಸೂರ್ಯನ ಬೆಳಕೇ ಎಲ್ಲ ಬಣ್ಣಗಳಿಗೂ ಮೂಲವಾಗಿ, ಅದನ್ನಾಧರಿಸಿಯೇ ಇದನ್ನೆಲ್ಲಾ ರೂಪಿಸಲಾಗುತ್ತಿತ್ತು. ಬಣ್ಣದ ಬೆಳಕು, ಬಣ್ಣದ ನೀರು, ಬಣ್ಣದ ಸ್ನಾನ, ಬಣ್ಣದ ಉಸಿರಾಟ, ಹೀಗೆ ಚಾಲ್ತಿಯಲ್ಲಿದ್ದ, ಇನ್ನೂ ಇರಬಹುದಾದ ಉಪಶಮನ ವಿಧಾನಗಳು ವರ್ಣರಂಜಿತವಾಗಿವೆ. ಹೀಗೆ ಮಾಯೆಯೋ ಅಮಾಯೆಯೊ, ವಿಜ್ಞಾನವೋ ವೇದಾಂತವೋ, ಅಗೋಚರವೋ ದೃಗ್ಗೋಚರವೋ, ಒಟ್ಟಿನಲ್ಲಿ ಬಣ್ಣ ಬದುಕಿನ ಬೆಳಕಾಗಿದೆ. ಇದೆಲ್ಲ ನೆಲದ ಕತೆಯಾದರೆ ಆಕಾಶದ್ದು ಅನಂತ ಸ್ಥಿತಿ. ಆಗಸದ ನೀಲವರ್ಣ, ಗ್ಯಾಲಕ್ಸಿ, ಅವುಗಳ ನಡುವಿನ ಬ್ಲ್ಯಾಕ್ ಹೋಲ್, ನಮಗೆ ಬಣ್ಣದ ಪ್ರಪಂಚವೇ ಆಗಿವೆ.

ಕೊನೆಯದಾಗಿ ಅಕ್ಷರಲೋಕಕ್ಕೆ ಬರೋಣ. ಇಲ್ಲಿ ಗೋಚರವಲ್ಲ, ಅಗೋಚರ ಬಣ್ಣದ್ದೇ ಸಾಮ್ರಾಜ್ಯ, ನಿರ್ಗುಣ ಬ್ರಹ್ಮನಂತೆ! ಇದರ ಹೆಸರೇ ವರ್ಣಮಾಲೆ. ಬಣ್ಣವಿಲ್ಲದೆ ಅಭಿನಯಿಸುವರ ಮೂಲ ಬಣ್ಣ ತಿಳಿಯಲು, ನಮಗೆ ಈ ವರ್ಣಮಾಲೆಯೇ ಆಸರೆ. ಮಾಯೆಯಲ್ಲ, ಮಾಯಿ ಸಹ. ಯಾರೋ ಬಣ್ಣ ಬದಲಾಯಿಸಿದ್ದನ್ನು, ಯಾರದೋ ಬಣ್ಣ ಬಯಲಾದದ್ದನ್ನು ಅಥವಾ ಮುಖದ ಬಣ್ಣ ಕೆಟ್ಟದ್ದನ್ನು ಸಂವಹನಗೊಳಿಸುವುದೇ ಈ ವರ್ಣಲೋಕ. ಹಾಗೆ ಬಣ್ಣದ ಚಿಟ್ಟೆಗಳನ್ನೋ, ಬಣ್ಣದ ಬೀಸಣಿಕೆಗಳನ್ನೋ, ಒಲವಿನ ವಿವಿಧ ಬಣ್ಣಗಳನ್ನೋ ತಿಳಿಸಿಕೊಡುವಂಥದ್ದು. ಮನೋಜ್ಞರಲ್ಲದವರಿಗೆ, ಹಾವ ಭಾವ, ಚಹರೆಗಳೊಂದಿಗೆ ಎಲ್ಲ ಅರ್ಥ ಮಾಡಿಕೊಳ್ಳದವರಿಗೆ ಅಕ್ಷರ ಪ್ರಪಂಚದ ಅರ್ಥ ಛಾಯೆಯೇ 'ಕ್ಷ'ಕಿರಣ. ಹೀಗೆಯೇ ಯೋಚಿಸುತ್ತ ಹೋದರೆ ಗೊತ್ತಿಲ್ಲದೆಯೇ ನಮ್ಮನ್ನು ಸಿಲುಕಿಸಿಕೊಂಡಿರುವ ಬಣ್ಣದ ಜಾಲದ ಅರಿವಾದೀತು. ಅದಾಗಿ ಬಸವಣ್ಣನವರ ಕ್ಷಮೆ ಕೋರಿ:

ಬಣ್ಣವೇ ಬದುಕಿನ ಮೂಲವಯ್ಯ
ಬಣ್ಣವಿಲ್ಲದ್ದು ಅದೆಂಥ ಜೀವನವಯ್ಯ
ಬಣ್ಣವಿರಲೇಬೇಕು ಜೀವಯಾನದಲಿ

ಎಂದು ನನ್ನ ಬಣ್ಣದ ನುಡಿಗಳನ್ನು ಮುಕ್ತಾಯಗೊಳಿಸುವೆ.